ಕರ್ನಾಟಕ ಸರ್ಕಾರ

ಸಂಖ್ಯೆ: ಪಪೂಶಿ/ಶೈಶಾ/ಪ್ರ.ಪಿ.ದಾ/2021-22

ನಿರ್ದೇಶಕರ ಕಛೇರಿ.
ಪದವಿ ಪೂರ್ವ ಶಿಕ್ಷಣ ಇಲಾಖೆ
ಸಂಪಿಗೆ ರಸ್ತೆ, 18ನೇ ಕ್ರಾಸ್
ಮಲ್ಲೇಶ್ವರಂ. ಬೆಂಗಳೂರು-12
ದಿನಾಂಕ: 10-08-2021.

## ಸುತ್ತೋಲೆ

ವಿಷಯ: 2021-22ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಥಮ ಪಿಯುಸಿ ದಾಖಲಾತಿ ಪ್ರಾರಂಭಿಸುವ ಕುರಿತು.

ಉಲ್ಲೇಖ: ಇಲಾಖಾ ಮಾರ್ಗಸೂಚಿ 2021-22, ದಿನಾಂಕ 23/07/2021.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2021-22ನೇ ಶೈಕ್ಷಣಿಕ ಸಾಲಿಗೆ ಪ್ರಥಮ ಪಿಯುಸಿ ದಾಖಲಾತಿಯನ್ನು ಎಸ್.ಎಸ್.ಎಲ್.ಸಿ ಫಲಿತಾಂಶ ಪ್ರಕಟಗೊಂಡ ಮರುದಿನದಿಂದ ಪ್ರಾರಂಭಿಸಲು ಉಲ್ಲೇಖಿತ ಇಲಾಖಾ ಮಾರ್ಗಸೂಚಿಯಲ್ಲಿ ತಿಳಿಸಲಾಗಿತ್ತು. ಪ್ರಸ್ತುತ ಎಸ್.ಎಸ್.ಎಲ್.ಸಿ ಫಲಿತಾಂಶ ದಿನಾಂಕ 09/08/2021ರಂದು ಪ್ರಕಟಗೊಂಡಿದ್ದರಿಂದ ಪ್ರಥಮ ಪಿಯುಸಿ ದಾಖಲಾತಿಯನ್ನು ಕೆಳಕಂಡಂತೆ ನಿರ್ವಹಿಸುವುದು.

### ಪ್ರಥಮ ಪಿಯುಸಿ ದಾಖಲಾತಿಯ ವೇಳಾ ಪಟ್ಟಿ

| ತರಗತಿ | ದಂಡ ಶುಲ್ಕವಿಲ್ಲದೆ ದಾಖಲಾತಿ ಕೊನೆಯ ದಿನಾಂಕ(ಖಜಾನೆಗೆ ಶುಲ್ಕವನ್ನು ಮಾರನೇ ಕಾರ್ಯನಿರತ ದಿನಾಂಕವನ್ನು ಕಡ್ಡಾಯವಾಗಿ ಪಾವತಿಸುವುದು) | ವಿಳಂಬ ದಾಖಲಾತಿ ರೂ. 670/- (ರೂ. ಆರುನೂರ ಎಪ್ಪತ್ತು ಮಾತ್ರ) ದಂಡ ಶುಲ್ಕದೊಂದಿಗೆ (ಎರಡೂ ದಿನಗಳು ಸೇರಿವೆ)(ಖಜಾನೆಗೆ ಶುಲ್ಕವನ್ನು ಮಾರನೇ ಕಾರ್ಯನಿರತ ದಿನಾಂಕದಂದು ಕಡ್ಡಾಯವಾಗಿ ಪಾವತಿಸುವುದು) | ವಿಶೇಷ ದಂಡ ಶುಲ್ಕ ರೂ. 2890/- (ರೂ 2220/- ಎರಡು ಸಾವಿರದ ಎರಡು ನೂರ ಇಪ್ಪತ್ತು + ರೂ. 670/- ಆರು ನೂರ ಎಪ್ಪತ್ತು ಮಾತ್ರ) ಎರಡೂ ದಿನಗಳು ಸೇರಿವೆ(ಖಜಾನೆಗೆ ಶುಲ್ಕವನ್ನು ಮಾರನೇ ಕಾರ್ಯನಿರತ ದಿನಾಂಕದಂದು ಕಡ್ಡಾಯವಾಗಿ ಪಾವತಿಸುವುದು) |
|---|---|---|---|
| ಪ್ರಥಮ ಪಿಯುಸಿ | **10/08/2021 ರಿಂದ 31/08/2021ರ ವರೆಗೆ** | **01/09/2021 ರಿಂದ 11/09/2021** | **13/09/2021 ರಿಂದ 25/09/2021** |

**2021-22ರ ಮಾರ್ಗಸೂಚಿಯಲ್ಲಿ ತಿಳಿಸಿರುವಂತೆ ದಾಖಲಾತಿ ಶುಲ್ಕಗಳನ್ನು ಸಂಗ್ರಹಿಸುವುದು. ಈ ರೀತಿ ಸಂಗ್ರಹಿಸಿದ ಶುಲ್ಕಗಳನ್ನು ಸರ್ಕಾರ/ಇಲಾಖೆಗೆ ದಾಖಲಾತಿ ದಿನಾಂಕ ಮುಗಿದ ಮಾರನೇ ಕಾರ್ಯನಿರತ ದಿನಾಂಕದಂದು (ದಂಡ ಶುಲ್ಕವಿಲ್ಲದೆ, ದಂಡ ಶುಲ್ಕ ಹಾಗೂ ವಿಶೇಷ ದಂಡ ಶುಲ್ಕ) ಖಜಾನೆಗೆ ಶುಲ್ಕಗಳನ್ನು**

ಕಡ್ಡಾಯವಾಗಿ ಜಮೆ ಮಾಡುವುದು. ಈ ಸಂಬಂಧ ಪ್ರಾಂಶುಪಾಲರು/ಆಡಳಿತ ಮಂಡಳಿಯವರು ಪೂರ್ಣ ಜವಾಬ್ದಾರರಾಗಿರುತ್ತಾರೆ. ಪ್ರಥಮ ಪಿಯುಸಿ ಆನ್‌ಲೈನ್ ತರಗತಿಗಳನ್ನು ದಿನಾಂಕ 16/08/2021ರಿಂದ ಪ್ರಾರಂಭಿಸಲು ಸೂಚಿಸಿದೆ.

Snehal

ನಿರ್ದೇಶಕರು

ಪದವಿ ಪೂರ್ವ ಶಿಕ್ಷಣ ಇಲಾಖೆ

ಪ್ರತಿಗಳು:

1. ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
2. ಸಹಾಯಕ ನಿರ್ದೇಶಕರು, ಇ-ಆಡಳಿತ, ಪದವಿ ಪೂರ್ವ ಶಿಕ್ಷಣ ಇಲಾಖೆ ಬೆಂಗಳೂರು ಇವರಿಗೆ ಜಿಲ್ಲಾ ಉಪ ನಿರ್ದೇಶಕರುಗಳ ಇ-ಮೇಲ್‌ಗೆ ಅಳವಡಿಸಲು.
3. ಕಛೇರಿ ಪ್ರತಿ.